*...continued from previous page.*

full text of the disclaimer clause of BSE.

**Disclaimer Clause of NHB:** The Company is having a valid Certificate of registration dated April 5, 2018 as amended on May 31, 2018 issued by the National Housing Bank (NHB) under Section 29A of the National Housing Bank Act, 1987. However the NHB does not accept any responsibility or guarantee about the present position as to the financial soundness of the Company or for the correctness of any of the statements or representations made or opinion expressed by the Company and for repayment of deposits /discharge of liabilities by the Company.

**General Risk:** Investments in equity and equity-related securities involve a degree of risk and Bidders should not invest any funds in the Offer unless they can afford to take the risk of losing their investment. Bidders are advised to read the risk factors carefully before taking an investment decision in the Offer. For taking an investment decision, Bidders must rely on their own examination of our Company and the Offer, including the risks involved. The Equity Shares in the Offer have neither been recommended, nor approved by the SEBI, nor does SEBI guarantee the accuracy or adequacy of the contents of the Red Herring Prospectus. Specific attention of the Bidders is invited to *"Risk Factors"* beginning on page 24 of the RHP.

| BOOK RUNNING LEAD MANAGERS | | | | | REGISTRAR TO THE OFFER | COMPANY SECRETARY AND COMPLIANCE OFFICER |
|---|---|---|---|---|---|---|
| ICICI Securities | citi | kotak Investment Banking | NOMURA | SBICAPS Complete Investment Banking Solutions | KFINTECH | **Harshada Pathak**<br>Company Secretary and Compliance Officer<br>Unit No. 802, 8th Floor, Natraj by Rustomjee Junction of Western Express Highway and M. V. Road, Andheri (East) Mumbai - 400 069, Maharashtra, India<br>**Tel:** +91 022 4168 9991<br>**E-mail:** complianceofficer@aadharhousing.com |
| **ICICI Securities Limited**<br>ICICI Venture House, Appasaheb Marathe Marg, Prabhadevi, Mumbai - 400 025, Maharashtra, India<br>**Tel:** +91 22 6807 7100<br>**E-mail:** aadharipo@icicisecurities.com<br>**Investor Grievance E-mail:** customercare@icicisecurities.com<br>**Website:** www.icicisecurities.com<br>**Contact Person:** Shekher Asnani/ Sumit Singh<br>**SEBI Registration No.:** INM000011179 | **Citigroup Global Markets India Private Limited**<br>1202, 12th Floor, First International Financial Centre, G Block, Bandra Kurla Complex, Bandra (East), Mumbai, Maharashtra - 400098<br>**Tel:** +91 22 6175 9999<br>**E-mail:** aadhar.ipo24@citi.com<br>**Investor Grievance E-mail:** investors.cgmib@citi.com<br>**Website:**www.online.citibank.co.in/rhtm/citigroupglobalscreen1.htm<br>**Contact Person:** Dylan Fernandes<br>**SEBI Registration No.:** INM000010718 | **Kotak Mahindra Capital Company Limited**<br>1st Floor, 27 BKC, Plot No. C – 27, G" Block, Bandra Kurla Complex, Bandra (East), Mumbai - 400 051, Maharashtra, India<br>**Tel:** +91 22 4336 0000<br>**E-mail:** aadhar.ipo@kotak.com<br>**Website:** https://investmentbank.kotak.com<br>**Investor Grievance ID:** kmccredressal@kotak.com<br>**Contact Person:** Ganesh Rane<br>**SEBI Registration Number:** INM000008704 | **Nomura Financial Advisory and Securities (India) Private Limited**<br>Ceejay House, Level 11, Plot F, Shivsagar Estate, Dr. Annie Besant Road, Worli, Mumbai - 400 018, Maharashtra, India<br>**Tel:** +91 22 4037 4037<br>**E-mail:** aadharhfipo@nomura.com<br>**Investor Grievance E-mail:** investorgrievances-in@nomura.com<br>**Website:**www.nomuraholdings.com/company/group/asia/india/index.html<br>**Contact Person:** Vishal Kanjani / Pradeep Tewani<br>**SEBI Registration No.:** INM000011419 | **SBI Capital Markets Limited**<br>Unit No. 1501, 15th floor, A & B Wing, Parinee Crescenzo Building, Plot C- 38, G Block, Bandra Kurla Complex, Bandra (East), Mumbai - 400 051, Maharashtra, India<br>**Tel:** +91 22 4006 9807<br>**E-mail:** aadhar.ipo@sbicaps.com<br>**Investor Grievance E-mail:** investor.relations@sbicaps.com<br>**Website:** www.sbicaps.com<br>**Contact Person:** Raghavendra Bhat / Vaibhav Shah<br>**SEBI Registration No.:** INM000003531 | **KFin Technologies Limited** *(formerly known as KFin Technologies Private Limited)*<br>Selenium Tower-B, Plot 31 & 32, Financial District, Nanakramguda, Serilingampally, Hyderabad - 500 032, Telangana, India<br>**Tel:** +91 40 6716 2222<br>**E-mail:** ahfl.ipo@kfintech.com<br>**Investor Grievance E-mail:** einward.ris@kfintech.com<br>**Website:** www.kfintech.com<br>**Contact Person:** M. Murali Krishna<br>**SEBI Registration No.:** INR000000221 | Bidders can contact the Compliance Officer and Company Secretary, the BRLMs or the Registrar to the Offer in case of any pre-Offer or post-Offer related grievances including non-receipt of letters of Allotment, non-credit of Allotted Equity Shares in the respective beneficiary account, non-receipt of refund intimations or non-receipt of funds by electronic mode. |

**AVAILABILITY OF THE RHP:** Investors are advised to refer to the RHP and the section titled *"Risk Factors"* beginning on page 24 of the RHP, before applying in the Offer. A copy of the RHP shall be available on website of SEBI at www.sebi.gov.in, websites of the Stock Exchanges i.e. BSE Limited and National Stock Exchange of India Limited at www.bseindia.com and www.nseindia.com, respectively, and on the website of the Company at https://aadharhousing.com/ and on the websites of the BRLMs, i.e. ICICI Securities Limited, Citigroup Global Markets India Private Limited, Kotak Mahindra Capital Company Limited, Nomura Financial Advisory and Securities (India) Private Limited and SBI Capital Markets Limited at www.icicisecurities.com, www.online.citibank.co.in/rhtm/citigroupglobalscreen1.htm, https://investmentbank.kotak.com, www.nomuraholdings.com/company/group/asia/india/index.html and www.sbicaps.com, respectively.

**Availability of the Abridged Prospectus:** A copy of the abridged prospectus shall be available on the website of the Company, the BRLMs and the Registrar to the offer at https://aadharhousing.com/, www.icicisecurities.com, www.online.citibank.co.in/rhtm/citigroupglobalscreen1.htm, https://investmentbank.kotak.com, www.nomuraholdings.com/company/group/asia/india/index.html and www.sbicaps.com and www.kfintech.com, respectively.

**AVAILABILITY OF BID CUM APPLICATION FORMS:** Bid cum Application Forms can be obtained from the Registered Office of the Company **Aadhar Housing Finance Limited, Tel:** +91 22 4168 9900; **The BRLMs :ICICI Securities Limited, Tel:** +91 22 6807 7100; **Citigroup Global Markets India Private Limited, Tel:** +91 22 6175 9999; **Kotak Mahindra Capital Company Limited, Tel:** +91 22 4336 0000; **Nomura Financial Advisory and Securities (India) Private Limited, Tel:** +91 22 4037 4037 and **SBI Capital Markets Limited, Tel:** +91 22 4006 9807, **Syndicate Members: Investec Capital Services (India) Private Limited, Tel:** +91 22 6849 7400; **SBICAP Securities Limited, Tel:** +91 22 6931 6204 and **Kotak Securities Limited, Tel:** +91 22 6218 5410 and at the select locations of the Sub-syndicate Members (as given below), SCSBs, Registered Brokers, RTAs and CDPs participating in the Offer. ASBA Forms will also be available on the websites of BSE and NSE and the Designated Branches of SCSBs, the list of which is available at websites of the Stock Exchanges and SEBI.

**Sub-Syndicate Members:** Almondz Global Securities Ltd, Anand Rathi Share & Stock Brokers Ltd, Axis Capital Limited, Centrum Broking Limited, Dalal & Broacha Stock Broking Private Limited, Finwizard Technology Private Limited, HDFC Securities Limited, IIFL Securities Limited, JM Financial Services Limited, Jobanputra Fiscal Services Private Limited, Keynote Capitals Limited, KJMC Capital Market Services Limited, LKP Securities Limited, Motilal Oswal Financial Services Ltd, Nuvama Wealth and Investment Limited (Edelweiss Broking Limited), Prabhudas Lilladher Pvt Ltd, Pravin Ratilal Share & Stock Brokers Limited, RR Equity Brokers Private Limited, Sharekhan Limited, SMC Global Securities Ltd and YES Securities (India) Limited

**Escrow Collection Bank and Refund Bank :** Axis Bank Limited

**Public Offer Account Bank :** Kotak Mahindra Bank Limited • **Sponsor Banks:** Axis Bank Limited and Kotak Mahindra Bank Limited

**UPI: UPI Bidders can also bid through UPI Mechanism.**

**All capitalized terms used herein and not specifically defined shall have the same meaning as ascribed to them in the RHP.**

For **Aadhar Housing Finance Limited**
On behalf of the Board of Directors
*Sd/-*
**Harshada Pathak**
Company Secretary and Compliance Officer

Place: Mumbai
Date: May 1, 2024

**Aadhar Housing Finance Limited** is proposing, subject to receipt of requisite approvals, market conditions and other considerations, an initial public offering of its equity shares (**"Equity Shares"**) and has filed the red herring prospectus dated April 30, 2024 (the **"RHP"**) with the RoC. The RHP is available on the website of SEBI at www.sebi.gov.in, website of stock exchanges i.e. NSE at www.nseindia.com, BSE at www.bseindia.com and on the website of the Company at https://aadharhousing.com/ and on the websites of the BRLMs, i.e. ICICI Securities Limited, Citigroup Global Markets India Private Limited, Kotak Mahindra Capital Company Limited, Nomura Financial Advisory and Securities (India) Private Limited and SBI Capital Markets Limited at www.icicisecurities.com, www.online.citibank.co.in/rhtm/citigroupglobalscreen1.htm, https://investmentbank.kotak.com, www.nomuraholdings.com/company/group/asia/india/index.html and www.sbicaps.com, respectively. Any potential investors should note that investment in equity shares involves a high degree of risk. For details, potential investors should refer to the RHP, including the section titled *"Risk Factors"* beginning on page 24 of the RHP. Potential investors should not rely on the DRHP for making any investment decision. Specific attention of the investors is invited to *"Risk Factors"* on page 24 of the RHP.

This announcement is not an offer of securities for sale in the United States or elsewhere. This announcement has been prepared for publication in India only and is not for publication or distribution, directly or indirectly, in or into the United States. The Equity Shares have not been, and will not be, registered under the United States Securities Act of 1933, as amended (the **"U.S. Securities Act"**) and may not be offered or sold within the United States, except pursuant to an exemption from, or in a transaction not subject to, the registration requirements of the U.S. Securities Act. Accordingly, the Equity Shares are only being offered and sold (a) within the United States solely to persons who are reasonably believed to be "qualified institutional buyers" (as defined in Rule 144A under the U.S. Securities Act) in transactions exempt from or not subject to the registration requirements of the U.S. Securities Act, and (b) outside the United States in "offshore transactions" as defined in and in reliance on Regulation S under the U.S. Securities Act and the applicable laws of the jurisdiction where those offers and sales occur.

Adfactors 37

# ಪಂಜಾಬ್‌ಗೆ ಸುಲಭ ತುತ್ತಾದ ಚೆನ್ನೈ

## ಬೇರ್‌ಸ್ಟೋ, ರಸ್ಸೋ ಉತ್ತಮ ಬ್ಯಾಟಿಂಗ್ | ರುತುರಾಜ್ ಅರ್ಧಶತಕ ವ್ಯರ್ಥ



**ಚೆನ್ನೈ:** ಕೆಕೆಆರ್ ವಿರುದ್ಧ ದಾಖಲೆಯ ಚೇಸ್ ಮಾಡಿ ಗೆದ್ದಿದ್ದ ಪಂಜಾಬ್ ಕಿಂಗ್ಸ್, ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಅವರ ತವರಿನಲ್ಲೇ ಸೋಲಿಸಿ ಗೆಲುವಿನ ಅಭಿಯಾನ ಮುಂದುವರಿಸಿದೆ.

ಮೊದಲು ಬ್ಯಾಟಿಂಗ್ ನಡೆಸಿದ್ದ ಚೆನ್ನೈ ಸೂಪರ್ ಕಿಂಗ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 162 ರನ್ ಗಳಿಸಿತ್ತು. ನಾಯಕ ರುತುರಾಜ್ ಗಾಯಕ್‌ವಾಡ್ 62, ಅಜಿಂಕ್ಯ ರೆಹಾನೆ 29, ಸಮೀರ್ 21 ರನ್ ಗಳಿಸಿದ್ದರು. ಈ ಪಂದ್ಯದಲ್ಲಿ ಪಂಜಾಬ್‌ನ ಬಿಗಿಯಾದ ಬೌಲಿಂಗ್‌ನಿಂದ ಚೆನ್ನೈ ಹೆಚ್ಚು ರನ್ ಗಳಿಸಲು ಆಗಲಿಲ್ಲ. ಹರ್‌ಪ್ರೀತ್ ಬ್ರಾರ್ 17ಕ್ಕೆ 2 ಮತ್ತು ರಾಹುಲ್ ಚಹರ್ 16ಕ್ಕೆ 2 ವಿಕೆಟ್ ಗಳಿಸಿದ್ದರು.

ಕಳೆದ ಪಂದ್ಯದಲ್ಲಿ ದಾಖಲೆಯ ಗೆಲುವು ಪಡೆದಿದ್ದ ಪಂಜಾಬ್, ಈ ಪಂದ್ಯದಲ್ಲೂ ಅಂಥದ್ದೇ ಆಟ ಮುಂದುವರಿಸಿತು. ಆಗಲೂ ಇಂಗ್ಲೆಂಡ್ ಆಟಗಾರ ಜಾನಿ ಬೇರ್‌ಸ್ಟೋ ಶತಕ ಬಾರಿಸಿ ಗೆಲುವಿಗೆ ನೆರವಾಗಿದ್ದರು. ಬುಧವಾರದ ಪಂದ್ಯದಲ್ಲೂ ಅವರು 30 ಎಸೆತಗಳಲ್ಲಿ 46 ರನ್ ಗಳಿಸಿ ಮತ್ತೆ ಗೆಲುವಿನ ದಡ ಹತ್ತಿಸಿದರು.

ಪ್ರಭಾಸಿಮ್ರಾನ್ ಸಿಂಗ್ 13, ಜಾನಿ ಬೇರ್‌ಸ್ಟೋ 46, ರಸ್ಸೋ 43, ಶಶಾಂಕ್ 25 ಮತ್ತು ಸ್ಯಾಮ್ ಕರನ್ 26 ರನ್ ಗಳಿಸಿದರು. 17.5 ಓವರ್‌ಗಳಲ್ಲಿ 3 ವಿಕೆಟ್‌ಗೆ 163 ರನ್ ಗಳಿಸಿ ಪಂಜಾಬ್ ಗೆಲುವಿನ ನಗೆ ಬೀರಿತು. ಈ ಪಂದ್ಯದಲ್ಲಿ ಪಂಜಾಬ್‌ಗೆ ಉತ್ತಮ ಆರಂಭ ಸಿಗಲಿಲ್ಲ. 19 ರನ್‌ಗೇ ಆರಂಭಿಕ ಆಟಗಾರ ಪ್ರಭಾಸಿಮ್ರಾನ್ ಔಟಾದರು. ಬಳಿಕ ರಸ್ಸೋ ಮತ್ತು ಬೇರ್‌ಸ್ಟೋ ಜತೆಯಾಗಿ ಚೆನ್ನೈ ಬೌಲರ್‌ಗಳನ್ನು ಕಾಡಿದರು. 83 ರನ್ ಇದ್ದಾಗ ಬೇರ್‌ಸ್ಟೋ ಔಟಾದರು. 113 ರನ್ ಆಗಿದ್ದಾಗ ರಸ್ಸೋ ಕೂಡ ಔಟಾಗಿ ಪೆವಿಲಿಯನ್‌ಗೆ ತೆರಳಿದರು. ಕಡೆಗೆ ನಾಯಕ ಸ್ಯಾಮ್ ಕರನ್ ಮತ್ತು ಶಶಾಂಕ್ ಗೆಲುವಿನ ದಡ ಮುಟ್ಟಿಸಿದರು.

ಚೆನ್ನೈನ ಆರಂಭ ನಿಧಾನಗತಿಯಲ್ಲಿತ್ತು. 8 ಓವರ್‌ಗಳಲ್ಲಿ 64 ರನ್ ಗಳಿಸಿದ್ದಾಗ ರೆಹಾನೆ ಔಟಾದರು. ಈಗಷ್ಟೇ ಭಾರತ ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಿರುವ ಶಿವಂ ದುಬೆ ಬಂದ ಹಾದಿಯಲ್ಲೇ ವಾಪಸ್ ಹೋದರು. ಇವರ ಖಾತೆಗೆ ಸೇರಿದ್ದು ಸೊನ್ನೆ ರನ್. ರವೀಂದ್ರ ಜಡೇಜಾ ಕೂಡ ಕೇವಲ 2 ರನ್ ಗಳಿಸಿದರು. ಸಮೀರ್ ಕೊಂಚ ನಿಂತು, ರುತುರಾಜ್‌ಗೆ ಸಾತ್ ನೀಡಿದರು. ಒಂದು ಕಡೆ ವಿಕೆಟ್ ಬೀಳುತ್ತಿದ್ದಂತೆ, ಮತ್ತೊಂದು ಕಡೆಯಲ್ಲಿ ರನ್ ಕೂಡ ಹೆಚ್ಚು ಹರಿಯಲಿಲ್ಲ, ಹೀಗಾಗಿ ಸಾಧಾರಣ ಮೊತ್ತ ದಾಖಲಿಸುವಲ್ಲಿ ಚೆನ್ನೈ ಯಶಸ್ವಿಯಾಯಿತು.

# ಹಿಂದೂ ಕಾಯ್ದೆ ರಹಿತ ಮದುವೆಗೆ ಮಾನ್ಯತೆ ಇಲ್ಲ



**ದೆಹಲಿ:** ಹಿಂದೂ ವಿವಾಹ ಎಂಬುದು ಹಾಡು ಮತ್ತು ನೃತ್ಯಕ್ಕಾಗಿ, ಒಳ್ಳೆಯ ಭೋಜನ ಸವಿಯಲು ಅಥವಾ ವಾಣಿಜ್ಯ ವಹಿವಾಟು ನಡೆಸಲು ಇರುವ ಕಾರ್ಯಕ್ರಮ ಅಲ್ಲ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಹಿಂದೂ ವಿವಾಹ ಕಾಯ್ದೆಗೆ ಅನುಗುಣವಾಗಿ ವಿವಾಹ ಆಗದೆ ಇದ್ದಲ್ಲಿ ಅದನ್ನು ಮಾನ್ಯ ಮಾಡಲು ಆಗದು ಎಂದು ಸ್ಪಷ್ಟಪಡಿಸಿದೆ. ಹಿಂದೂ ವಿವಾಹವು ಒಂದು ಸಂಸ್ಕಾರ. ಅದಕ್ಕೆ ಭಾರತೀಯ ಸಮಾಜದಲ್ಲಿ ಬಹಳ ಮೌಲ್ಯಯುತವಾದ ಸಂಪ್ರದಾಯದ ಸ್ಥಾನ ನೀಡಬೇಕಾಗುತ್ತದೆ ಎಂದು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಆಗಸ್ಟಿನ್ ಜಾರ್ಜ್ ಮಸೀ ಅವರು ಇದ್ದ ವಿಭಾಗೀಯ ಪೀಠ ಹೇಳಿದೆ. ಇಬ್ಬರು ವಾಣಿಜ್ಯ ಪೈಲಟ್‌ಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಈಚೆಗೆ ನೀಡಿರುವ ತೀರ್ಪಿನಲ್ಲಿ ಪೀಠವು, ಯುವಕ, ಯುವತಿಯರು ಮದುವೆಗೆ ಮೊದಲೇ ಆ ಸಂಪ್ರದಾಯವು ಅದೆಷ್ಟು ಪವಿತ್ರ ಎಂಬ ಬಗ್ಗೆ ಆಳವಾಗಿ ಆಲೋಚನೆ ಮಾಡಬೇಕು ಎಂದು ಕಿವಿಮಾತು ಹೇಳಿದೆ.

# ಬಿಸಿಗಾಳಿಗೆ 9 ಜನರ ಸಾವು

**ದೆಹಲಿ:** ಇಡೀ ದೇಶವೇ ಬಿಸಿಲಿನ ಹೊಡೆತಕ್ಕೆ ಬೇಸತ್ತಿದೆ. ಎಲ್ಲೆಡೆಯೂ ಮಳೆಗಾಗಿ ಹಾಹಾಕಾರ ಶುರುವಾಗಿದೆ. ಅದರ ಜತೆಗೆ ಚುನಾವಣೆಯ ಕಾವು ಬೇರೆ. ಹಾಗೇ ಪೂರ್ವ ಭಾರತದಲ್ಲಿ ಬಿಸಿಗಾಳಿಯಿಂದ ಜನ ತತ್ತರಿಸಿದ್ದಲ್ಲದೇ, 9ಕ್ಕೂ ಹೆಚ್ಚು ಜನರ ಮೃತ್ಯುವಾಗಿದೆ ಎಂದು ತಿಳಿದುಬಂದಿದೆ. ಪೂರ್ವ ಭಾರತದಲ್ಲಿ 28.12ಡಿಗ್ರಿ ಸೆಲ್ಸಿಯಸ್ ತಾಪಮಾನ ಕಂಡುಬಂದಿದ್ದು, ಇದು 1901ರಿಂದ ಇಲ್ಲಿಯ ವರೆಗೆ ಕಂಡುಬಂದ ಅತೀ ಹೆಚ್ಚಿನ ತಾಪಮಾನವಾಗಿದೆ ಎಂದು ಹೇಳಲಾಗಿದೆ.

ಇದು ಎಲ್ ನಿನೊ ವರ್ಷವಾಗಿದ್ದರಿಂದ ಅತೀ ಹೆಚ್ಚಿನ ತಾಪಮಾನವಾಗುತ್ತಿದೆ. ಇಂತಹ ಸಮಯದಲ್ಲಿ ಗಾಳಿಯೂ ಭೂಮಿಯಿಂದ ಸಮುದ್ರದೆಡೆಗೆ ಬೀಸುವುದರಿಂದ ಭೂಮಿಯ ತಾಪಮಾನ ಹೆಚ್ಚುಗುವುದು ಎಂದು ಭಾರತೀಯ ಹವಾಮಾನ ಇಲಾಖೆಯ ಮುಖ್ಯಸ್ಥ ಮೃತ್ಯುಂಜಯ ಮಹಾಪಾತ್ರಾ, ಹೇಳಿದ್ದಾರೆ.

# ಕ್ವಾರಿಯಲ್ಲಿ ಸ್ಫೋಟ: 4 ಮಂದಿ ಮೃತ

**ಚೆನ್ನೈ:** ತಮಿಳುನಾಡಿನ ಕರಿಯಪಟ್ಟಿಯಲ್ಲಿಯ ಕಲ್ಲುಕ್ವಾರಿಯೊಂದರ ಉಗ್ರಾಣದಲ್ಲಿ ಬುಧವಾರ ಬೆಳಿಗ್ಗೆ ಸ್ಫೋಟ ಸಂಭವಿಸಿ ನಾಲ್ಕು ಜನ ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ. ಈ ಉಗ್ರಾಣದಲ್ಲಿ ಕಲ್ಲುಗಳನ್ನು ಒಡೆಯಲು ಬಳಸುವ ಸ್ಫೋಟಕಗಳನ್ನು ಇರಿಸಲಾಗಿತ್ತು ಮತ್ತು ಇದು ಕ್ವಾರಿಗೆ ಸಮೀಪದಲ್ಲೇ ಇತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆಯಲ್ಲಿ ಎರಡು ವಾಹನಗಳು ಸಂಪೂರ್ಣವಾಗಿ ಹಾನಿಗೀಡಾಗಿವೆ. ಸ್ಫೋಟದ ಸದ್ದು 20 ಕಿಮೀ ದೂರದವರೆಗೂ ಕೇಳಿದೆ ಎಂದು ಅವರು ತಿಳಿಸಿದ್ದಾರೆ.

# ದೆಹಲಿ: 100ಕ್ಕೂ ಹೆಚ್ಚು ಶಾಲೆಗಳಿಗೆ ಬಾಂಬ್ ಬೆದರಿಕೆ

## ಇ-ಮೇಲ್ ಮುಖಾಂತರ ಬಾಂಬ್ ಬೆದರಿಕೆ | ಇ-ಮೇಲ್ ಕಳುಹಿಸಿದವರ ಮೂಲ ಪತ್ತೆ



**ದೆಹಲಿ:** ದೆಹಲಿ ಮತ್ತು ನೋಯ್ಡಾದಲ್ಲಿ 50 ಕ್ಕೂ ಹೆಚ್ಚು ಶಾಲೆಗಳಿಗೆ ಬುಧವಾರ (ಮೇ.1 ರಂದು) ಬೆಳಿಗ್ಗೆ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಬಂದಿದ್ದು, ವಿದ್ಯಾರ್ಥಿಗಳು ಸೇರಿದಂತೆ ಶಾಲೆಯಲ್ಲಿದ್ದ ಎಲ್ಲರನ್ನೂ ಮನೆಗೆ ಕಳುಹಿಸಲಾಗಿದೆ ಎಂದು ವರದಿ ತಿಳಿಸಿದೆ.

ದೆಹಲಿ ಪಬ್ಲಿಕ್ ಸ್ಕೂಲ್‌ನ (ಡಿಪಿಎಸ್) ದ್ವಾರಕಾ ಮತ್ತು ವಸಂತ್ ಕುಂಜ್ ಘಟಕಗಳು, ಪೂರ್ವ ಮಯೂರ್ ವಿಹಾರ್‌ನ ಮದರ್ ಮೇರಿ ಸ್ಕೂಲ್, ಸಂಸ್ಕೃತ್ ಶಾಲೆ, ಪುಷ್ಪ್ ವಿಹಾರ್‌ನ ಅಮಿಟಿ ಸ್ಕೂಲ್ ಮತ್ತು ನೈಋತ್ಯ ದೆಹಲಿಯ ಡಿಎವಿ ಶಾಲೆಗೆ ಬಾಂಬ್ ಬೆದರಿಕೆ ಬಂದಿತ್ತು. ಡಿಪಿಎಸ್ ನೋಯ್ಡಾಕ್ಕೂ ಇದೇ ರೀತಿಯ ಬಾಂಬ್ ಬೆದರಿಕೆ ಬಂದಿದೆ ಎಂದು ಪೊಲೀಸರು ಹೇಳಿದ್ದಾರೆ.

ಬಾಂಬ್ ಬೆದರಿಕೆ ಬಂದ ಕೂಡಲೇ ಎಲ್ಲಾ ಮಕ್ಕಳನ್ನು ಮನೆಗೆ ಕಳುಹಿಸಲಾಗಿದೆ. ಡಿಪಿಎಸ್ ದ್ವಾರಕಾ ಶಾಲೆಗೆ ಇಮೇಲ್ ಮೂಲಕ ಬೆಳಿಗ್ಗೆ 6 ಗಂಟೆಗೆ ಬಾಂಬ್ ಬೆದರಿಕೆ ಬಂದಿದೆ. ಆ ಬಳಿಕ ದೆಹಲಿ ಪೊಲೀಸ್ ಸಿಬ್ಬಂದಿಗಳು, ಅಗ್ನಿಶಾಮಕ ಸಿಬಂದಿಗಳು ಹಾಗೂ ಬಾಂಬ್ ನಿಷ್ಕ್ರಿಯ ದಳ (ಬಿಡಿಎಸ್) ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದೆ.

**ಇ-ಮೇಲ್ ಕಳುಹಿಸಿದವರ ಮೂಲ ಪತ್ತೆ:** ದೆಹಲಿ-ಎನ್‌ಸಿಆರ್‌ನ ಹಲವು ಶಾಲೆಗಳಿಗೆ ಬಾಂಬ್ ಬೆದರಿಕೆ ಇಮೇಲ್ ಕಳುಹಿಸಿದವರ ಮೂಲವನ್ನು ದೆಹಲಿ ಪೊಲೀಸರು ಪತ್ತೆ ಮಾಡಿದ್ದು, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಲಾಗುವುದು ಎಂದು ದೆಹಲಿಯ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಹೇಳಿದ್ದಾರೆ.

ಇದೊಂದು ಹುಸಿ ಬಾಂಬ್ ಕರೆಯಂತೆ ತೋರುತ್ತಿದ್ದು, ಜನರು ಆತಂಕಪಡುವ ಅಗತ್ಯವಿಲ್ಲ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ. ಲೆಫ್ಟಿನೆಂಟ್ ಗವರ್ನರ್ ಭೇಟಿ ನೀಡಿದ್ದ ಡಿಎವಿ ಶಾಲೆಗೂ ಬಾಂಬ್ ಬೆದರಿಕೆ ಬಂದಿದೆ.

ಬಾಂಬ್ ಬೆದರಿಕೆಗೆ ಕ್ಷಿಪ್ರವಾಗಿ ಪ್ರತಿಕ್ರಿಯಿಸಿರುವ ದೆಹಲಿ ಪೊಲೀಸರು, ಶಾಲೆಗಳನ್ನು ಸುತ್ತುವರಿದಿದ್ದಾರೆ. ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನದಳವನ್ನು ಬಳಸಿಕೊಂಡು ಶೋಧ ನಡೆಸಿದ್ದಾರೆ ಎಂದು ಸಕ್ಸೇನಾ ತಿಳಿಸಿದ್ದಾರೆ.

ಯಾವುದೇ ಅಹಿತಕರ ಘಟನೆ ನಡೆಯದಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ಪೊಲೀಸರು ಸಜ್ಜಾಗಿದ್ದಾರೆ ಎಂದು ಅವರು ತಿಳಿಸಿದ್ದಾರೆ.

### ರಾಜಭವನಕ್ಕೂ ಬಾಂಬ್ ಬೆದರಿಕೆ

**ಕೋಲ್ಕತ್ತ:** ಪಶ್ಚಿಮ ಬಂಗಾಳದ ರಾಜಭವನಕ್ಕೆ ಬಾಂಬ್ ಬೆದರಿಕೆ ಬಂದಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಪಶ್ಚಿಮ ಬಂಗಾಳದ ರಾಜಭವನ ಸ್ಫೋಟಿಸುವುದಾಗಿ ಕಿಡಿಗೇಡಿಗಳು ಕರೆ ಮಾಡಿದ್ದು, ನಾವು ಟೆರರೂಸರ್ಸ್ ಎಂಬ ಭಯೋತ್ಪಾದಕ ಗುಂಪಿಗೆ ಸೇರಿದವರು ಎಂದು ಹೇಳಿಕೊಂಡಿದ್ದಾರೆ. ರಾಜಭವನ ಕಟ್ಟಡದ ಒಳಗೆ ಸ್ಫೋಟಕ ಸಾಮಗ್ರಿ ಇರಿಸಿದ್ದೇವೆ. ಅಲ್ಲಿರುವ ಅನೇಕರು ಸಾಯುತ್ತಾರೆ ಎಂದು ಅವರು ಕರೆ ಮಾಡಿದ್ದಾರೆ. ಆದರೆ ಪಶ್ಚಿಮ ಬಂಗಾಳ ಪೊಲೀಸರು ಇದೊಂದು ಹುಸಿ ಕರೆ ಎಂದಿದ್ದಾರೆ. ಕರೆ ಮಾಡಿದವರ ಬಗ್ಗೆ ಪತ್ತೆಹಚ್ಚಲು ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

# ಮುಂಬೈ ತಂಡದಲ್ಲಿ ಬಿರುಕು?: ಮೈಕಲ್ ಕ್ಲಾರ್ಕ್ ಶಂಕೆ


**ಮುಂಬೈ:** ಪ್ರಸಕ್ತ ಐಪಿಎಲ್‌ನಲ್ಲಿ ಕಳಪೆ ಪ್ರದರ್ಶನ ಮುಂದುವರಿಸಿರುವ ಮುಂಬೈ ಇಂಡಿಯನ್ಸ್ ತಂಡ ಇಬ್ಭಾಗವಾಗಿದೆ ಎಂದು ಆಸ್ಟ್ರೇಲಿಯದ ಮಾಜಿ ನಾಯಕ ಮೈಕಲ್ ಕ್ಲಾರ್ಕ್ ಶಂಕೆ ವ್ಯಕ್ತಪಡಿಸಿದ್ದಾರೆ.

ಈಗಾಗಲೇ ಹಲವಾರು ಬಾರಿ ಐಪಿಎಲ್ ಟ್ರೋಫಿ ಗೆದ್ದಿರುವ ಈ ತಂಡದಲ್ಲಿ ಎಲ್ಲವೂ ಸರಿಯಾಗಿದ್ದವು. ಆದರೆ, ಈ ಐಪಿಎಲ್‌ನಲ್ಲಿ ಹಾರ್ದಿಕ್ ಪಾಂಡ್ಯ ಅವರನ್ನು ನಾಯಕನನ್ನಾಗಿ ಮಾಡಿದ ಮೇಲೆ ಬದಲಾವಣೆಯಾಗಿವೆ. ಆಟಗಾರರ ವರ್ತನೆಗಳು ತಂಡದಲ್ಲಿ ಬಿರುಕು ಮೂಡಿರುವುದನ್ನು ತೋರಿಸುತ್ತವೆ ಎಂದಿದ್ದಾರೆ.

ತಂಡದ ಯಶಸ್ಸಿಗೆ ಸಾಂಘಿಕ ಪ್ರದರ್ಶನ ಅತ್ಯಗತ್ಯ. ಆದರೆ ಇಲ್ಲಿ ಅದು ಕಾಣಿಸುತ್ತಿಲ್ಲ ಎಂದೂ ಅವರು ಹೇಳಿದ್ದಾರೆ. ಈಗಿನ ಸ್ಥಿತಿ ನೋಡಿದರೆ ಪ್ಲೇಆಫ್‌ಗೆ ಹೋಗಲು ಮುಂದಿನ ಐದೂ ಪಂದ್ಯಗಳನ್ನೂ ಗೆಲ್ಲಬೇಕು. ಆದರೆ, ಇದು ಕಷ್ಟದ ಸ್ಥಿತಿ. ಇಲ್ಲಿ ಹಲವಾರು ಉತ್ತಮ ಆಟಗಾರರಿದ್ದರೂ, ಅವರಿಂದ ಅಂಥ ಪ್ರದರ್ಶನ ಬರುತ್ತಿಲ್ಲ ಎಂದೂ ಹೇಳಿದ್ದಾರೆ.

# ರಾಮಲಲ್ಲಾನ ದರ್ಶನ ಪಡೆದ ರಾಷ್ಟ್ರಪತಿ

## ಮಂದಿರ ಉದ್ಘಾಟನೆ ಬಳಿಕ ಮೊದಲ ಅಯೋಧ್ಯೆ ಭೇಟಿ



**ಅಯೋಧ್ಯೆ:** ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ಭವ್ಯ ಶ್ರೀರಾಮ ಮಂದಿರದ ಉದ್ಘಾಟನೆಯಾದ ಬಳಿಕ ಇದೇ ಮೊದಲ ಬಾರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ ನೀಡಿ ಬುಧವಾರ ರಾಮಲಲ್ಲಾ ದರ್ಶನ ಪಡೆದರು. ನಂತರ ಸಂಜೆ ಆರತಿಯಲ್ಲೂ ಭಾಗಿಯಾದರು.

ಮುರ್ಮು ಅವರು ದೇವಾಲಯದೊಳಗೆ ಕೆಲಕಾಲ ಧ್ಯಾನಾಸಕ್ತರಾಗಿದ್ದರು. ಅದಕ್ಕೂ ಮುನ್ನ, ಹನುಮಾನ್ ಗಡಿಯ ದರ್ಶನ ಪಡೆದರು. ಸರಯೂ ದಡದಲ್ಲಿ ಆರತಿಯನ್ನೂ ಬೆಳಗಿದರು. ಪೂಜೆ ಸಲ್ಲಿಸಿದ ಅರ್ಚಕ ರಾಜು ದಾಸ್ ಅವರ ಮೂಲಕ ದೇವರಿಗೆ ಬೆಳ್ಳಿ ಗದೆ, ಬೆಳ್ಳಿ ರಾಮ್ ದರ್ಬಾರ್ ಮತ್ತು ಹಸುವಿನ ಪ್ರತಿಕೃತಿಯನ್ನು ಕಾಣಿಕೆಯಾಗಿ ಅರ್ಪಿಸಿದರು. ಈ ಸಂದರ್ಭ ಉತ್ತರ ಪ್ರದೇಶ ರಾಜ್ಯಪಾಲರಾದ ಆನಂದಿ ಬೆನ್ ಪಟೇಲ್ ಮತ್ತು ಯುಪಿ ಸರಕಾರದ ಸಚಿವ ಸೂರ್ಯ ಪ್ರತಾಪ್ ಶಾಹಿ ಉಪಸ್ಥಿತರಿದ್ದರು.

# ಗೋಲ್ಡಿ ಬ್ರಾರ್ ಹತ್ಯೆ

## ಸಿಧು ಮೊಸೆವಾಲಾ ಕೊಲೆಯ ರೂವಾರಿ ಯುಎಸ್‌ನ ಹೊಟೇಲ್‌ನಲ್ಲಿ ಗುಂಡೇಟು



**ದೆಹಲಿ:** ಪಂಜಾಬಿ ಗಾಯಕ ಸಿಧು ಮೊಸೆವಾಲಾ ಹತ್ಯೆ ಪ್ರಕರಣದ ಪ್ರಮುಖ ರೂವಾರಿ ಗೋಲ್ಡಿ ಬ್ರಾರ್ ಗುಂಡಿನ ದಾಳಿಯಲ್ಲಿ ಹತ್ಯೆಗೀಡಾಗಿದ್ದಾನೆ ಎಂದು ವರದಿ ಆಗಿದೆ.

ಯುಎಸ್‌ನ ಕ್ಯಾಲಫೋರ್ನಿಯಾದ ಹೊಟೇಲ್ ಫೇರ್‌ಮೌಂಟ್‌ಲ್ಲಿ ಗೋಲ್ಡಿ ಬ್ರಾರ್‌ನನ್ನು ಗುಂಡಿಕ್ಕೆ ಹತ್ಯೆ ಮಾಡಲಾಗಿದೆ ಎಂದು ವರದಿಯಾಗಿದೆ.

ಈ ಕೃತ್ಯವನ್ನು ದಲ್ಲಾ ಲಖ್ಬೀರ್ ಗ್ಯಾಂಗ್‌ನ ಸದಸ್ಯರು ಮಾಡಿದ್ದಾರೆ ಎಂದು ವರದಿ ತಿಳಿಸಿದೆ.

ಆದರೆ ಈ ಬಗ್ಗೆ ಗುಪ್ತಚರ ಸಂಸ್ಥೆಗಳು ಮತ್ತು ಭದ್ರತಾ ಅಧಿಕಾರಿಗಳಿಂದ ಅಧಿಕೃತ ಮಾಹಿತಿ ಇದುವರೆಗೆ ಹೊರಬಿದ್ದಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಗೋಲ್ಡಿ ಹತ್ಯೆ ವಿಚಾರ ಹಬ್ಬಿದೆ.

ಲಾರೆನ್ಸ್ ಬಿಷ್ಣೋಯಿ ಸಿಧು ಮೂಸೆವಾಲಾ ಹತ್ಯೆ ಹಿಂದಿನ ಪ್ರಮುಖ ಮಾಸ್ಟರ್ ಮೈಂಡ್ ಆಗಿದ್ದಾನೆ. ಇದೇ ಗ್ಯಾಂಗ್ ನಲ್ಲಿರುವ ಗೋಲ್ಡಿ ಬ್ರಾರ್ ಸಿಧು ಹತ್ಯೆಯ ರೂವಾರಿ ಆಗಿದ್ದ. ಕೆನಡಾದಲ್ಲಿದ್ದುಕೊಂಡೇ ಅಪರಾಧವನ್ನು ಕೃತ್ಯವನ್ನು ಮಾಡುತ್ತಿದ್ದ ಈತನನ್ನು ಭಾರತ ಸರಕಾರ ವರ್ಷದ ಆರಂಭದಲ್ಲಿ ಭಯೋತ್ಪಾದಕ ಎಂದು ಘೋಷಿಸಿತ್ತು.

# ಸಲ್ಮಾನ್ ಮನೆ ಮೇಲೆ ಗುಂಡು: ಆರೋಪಿ ನೇಣು

## ಕಸ್ಟಡಿಯಲ್ಲಿದ್ದ ಆರೋಪಿ ಅನೂಜ್ ನೇಣು ಬಿಗಿದುಕೊಂಡು ಆತ್ಮಹತ್ಯೆ

**ಮುಂಬೈ:** ಬಾಲಿವುಡ್ ನಟ ಸಲ್ಮಾನ್ ಖಾನ್ ಅವರ ಮನೆ ಬಳಿ ನಡೆದಿದ್ದ ಗುಂಡಿನ ದಾಳಿ ಪ್ರಕರಣ ಸಂಬಂಧ ಪೊಲೀಸ್ ಕಸ್ಟಡಿಯಲ್ಲಿದ್ದ ಆರೋಪಿ ಅನೂಜ್ ತಪನ್ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆತ್ಮಹತ್ಯೆಗೆ ಯತ್ನಿಸಿದ್ದ ಅನೂಜ್ ತಪನ್ನನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಷ್ಟರಲ್ಲಾಗಲೇ ಆತ ಕೊನೆಯುಸಿರೆಳೆದಿದ್ದಾನೆ ಎಂದು ಮುಂಬೈ ಪೊಲೀಸರು ತಿಳಿಸಿರುವುದಾಗಿ ಸುದ್ದಿಸಂಸ್ಥೆ ಎಎನ್‌ಐ ವರದಿ ಮಾಡಿದೆ.

ಏ.14ರಂದು ಮುಂಬೈನ ಬಾಂದ್ರಾದಲ್ಲಿನ ಸಲ್ಮಾನ್ ಮನೆ ಬಳಿ ಬೈಕ್‌ನಲ್ಲಿ ಬಂದಿದ್ದ ಇಬ್ಬರು ದುಷ್ಕರ್ಮಿಗಳು ಗುಂಡು ಹಾರಿಸಿದ್ದರು. ಘಟನೆ ಸಂಬಂಧ ವಿಕ್ಕಿ ಗುಪ್ತಾ (24), ಸಾಗರ್ ಪಾಲ್ (21), ಸುಭಾಷ್ ಚಂದರ್ (37) ಮತ್ತು ಅನೂಜ್ ತಪನ್ (32) ಅವರನ್ನು ಪೊಲೀಸರು ಬಂಧಿಸಿದ್ದರು.

ಸಲ್ಮಾನ್ ಖಾನ್ ಅವರ ಮನೆ ಬಳಿ ನಡೆದಿದ್ದ ಗುಂಡಿನ ದಾಳಿಗೆ ಸಂಬಂಧಿಸಿ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್‌ನನ್ನು ಪೊಲೀಸರು ವಿಚಾರಣೆ ನಡೆಸುವ ಸಾಧ್ಯತೆ ಇದೆ. ಈ ಕೃತ್ಯದ ಸಂಬಂಧ ಆತನ ಸಹೋದರ ಅನ್ಮೋಲ್ ಬಿಷ್ಣೋಯ್‌ಗಾಗಿ ಈಗಾಗಲೇ ಲುಕ್‌ಔಟ್ ನೋಟಿಸ್ ಜಾರಿ ಮಾಡಲಾಗಿದೆ ಎಂದೂ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

# ಟಾರ್ಪಿಡೋ ಉಡ್ಡಯನ ಪರೀಕ್ಷೆ ಯಶಸ್ವಿ

## ಡಿಆರ್‌ಡಿಒ ಅಭಿವೃದ್ಧಿಪಡಿಸಿದ ಸ್ಮಾರ್ಟ್ ಕ್ಷಿಪಣಿ



**ಬಾಲೇಶ್ವರ:** ಸೂಪರ್‌ಸಾನಿಕ್ ಕ್ಷಿಪಣಿಗಳ ಸಹಾಯದಿಂದ ಟಾರ್ಪಿಡೊ ಉಡ್ಡಯನ ವ್ಯವಸ್ಥೆಯ ಪರೀಕ್ಷಾರ್ಥ ಪ್ರಯೋಗ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ದ್ವೀಪದಲ್ಲಿ ಬುಧವಾರ ಯಶಸ್ವಿಯಾಗಿ ನೆರವೇರಿಸಲಾಯಿತು.

ಬೆಳಿಗ್ಗೆ 8.30ರ ವೇಳೆಗೆ, ಸಂಚಾರ ಲಾಂಚರ್‌ನ ಸಹಾಯದಿಂದ ಈ ವ್ಯವಸ್ಥೆಯ ಪರೀಕ್ಷೆಯನ್ನು ನೆರವೇರಿಸಲಾಯಿತು ಎಂದು ರಕ್ಷಣಾ ಸಚಿವಾಲಯ ಅಧಿಕಾರಿಗಳು ಹೇಳಿದ್ದಾರೆ.

ಕ್ಷಿಪಣಿ ವ್ಯವಸ್ಥೆಯ ಎಲ್ಲ ಭಾಗಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವುದನ್ನು ಈ ಪರೀಕ್ಷೆ ದೃಢಪಡಿಸಿದೆ. ಇದು ಭಾರತೀಯ ನೌಕಾಪಡೆಯ ಜಲಾಂತರ್ಗಾಮಿ ನಿಗ್ರಹ ಸಾಮರ್ಥ್ಯವನ್ನು ಹೆಚ್ಚಿಸಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮುಂದಿನ ತಲೆಮಾರಿನ, ಟಾರ್ಪಿಡೊ ಚಿಮ್ಮುವಂತೆ ಮಾಡುವ ಕಡಿಮೆ ತೂಕದ ಈ ಸ್ಮಾರ್ಟ್ ಕ್ಷಿಪಣಿ ವ್ಯವಸ್ಥೆಯನ್ನು ಡಿಆರ್‌ಡಿಒ ಅಭಿವೃದ್ಧಿಪಡಿಸಿದೆ.

ಶತ್ರುಪಾಳಯದ ಯುದ್ಧನೌಕೆಗಳನ್ನು ನಾಶಪಡಿಸುವ ಸಿಡಿತಲೆಗಳಿಗೆ ಟಾರ್ಪಿಡೊ ಎನ್ನಲಾಗುತ್ತದೆ. ಇವುಗಳನ್ನು ನೀರಿನ ಮೇಲ್ಭದರ ಅಥವಾ ಒಳಗಡೆಯಿಂದ ಹಾರಿಸಲಾಗುತ್ತದೆ. ನಿರ್ದೇಶಿತ ಗುರಿಗೆ ಅಪ್ಪಳಿಸಿದಾಗ ಇಲ್ಲವೇ ಅವುಗಳ ಸಮೀಪ ಹೋದಾಗ ಈ ಸಿಡಿತಲೆಗಳು ಸ್ಫೋಟಗೊಳ್ಳುತ್ತವೆ.